ದಿನಾಂಕಃ 31-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ ವೈ ಎಂ ಆರ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಈ ದಾವೆಯ 1 ನೇ ವಾದಿ ನನ್ನ ತಂದೆ ಮತ್ತು 2 ಮತ್ತು 3 ನೇ ವಾದಿಯರು ನನ್ನ ಸಹೋದರರು. ಸದರಿ ದಾವೆಯನ್ನು ನಾನು ನಮ್ಮ ಜಾಗವನ್ನು ಒತ್ತುವರಿ ಮಾಡಲು ಪ್ರತಿವಾದಿಗಳು ಪ್ರಯತ್ನಿಸಿದ್ದರ ವಿರುದ್ದ ಹೂಡಿದ್ದೆನೆ. ದಾವಾಸ್ತಿಯನ್ನು 1978 ರಲ್ಲಿ ನನ್ನ ತಂದೆ ಕ್ರಯಕ್ಕೆ ಪಡೆದಿರುತ್ತಾರೆ. ನನ್ನ ತಂದೆ ದಾವಾಸ್ತಿ ಖರೀದಿಸುವ ಕಾಲಕ್ಕೆ ಖಾಲಿ ನಿವೇಶನವಾಗಿತ್ತು. ಸದರಿ ನಿವೇಶನದ ವಿಸ್ತೀರ್ಣ ಉತ್ತರ-ದಕ್ಷಿಣ 25 ವರೆ ಅಡಿ . ಪೂರ್ವ-ಪಶ್ಚಿಮ 22 ವರೆ ಅಡಿ ಇದೆ. ಸದರಿ ನಿವೇಶನವನ್ನು ಕೊಂಡುಕೊಂಡ ಎಷ್ಟು ದಿನಗಳ ನಂತರ ಮನೆ ನಿರ್ಮಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ನಿರ್ಮಾಣ ಮಾಡುವ ಸಮಯದಲ್ಲಿ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದ ಬಗ್ಗೆ ನನ್ನ ತಂದೆಗೆ ಗೊತ್ತು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯಲ್ಲಿ ಪರವಾನಿಗೆಯನ್ನು ಪಡೆದ ಬಗ್ಗೆ, ನಿವೇಶನದ ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಲಾಗಿದೆ ಎಂಬ ಬಗ್ಗೆ ದಾವೆಯಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ಪರವಾನಿಗೆಗೆ ಸಂಬಂಧಪಟ್ಟ ದಾಖಲೆಗಳನ್ನು ಸಹ ಹಾಜರುಪಡಿಸಿರುತ್ತೇನೆ. ಸದರಿ ನಿವೇಶನದಲ್ಲಿ ಕೆಂಪು ಹೆಂಚಿನ ಮನೆಯನ್ನು ಕಟ್ಟಿರುತ್ತೇವೆ. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣಿಸುತ್ತಿರುವ ಕೆಂಪು ಹೆಂಚಿನ ಮನೆ ನಮ್ಮದೆ ಎಂದು ಗುರುತಿಸಿದರ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಕೆಂಪು ಹೆಂಚಿನ ಮನೆಯ ಪಕ್ಕದ ತಳಪಾಯ ಹಾಕಿರುವ ಆಸ್ತಿ ಪ್ರತಿವಾದಿಗಳದ್ದು ಎಂದರೆ ಸರಿ. ನಿಪಿ-1 ರಲ್ಲಿ 1979 ನೇ ಸಾಲು ಎಂದು ಉಲ್ಲೇಖವಿದೆ ಎಂದರೆ ಸರಿ. ಸದರಿ ನಿಪಿ-1 ರ ಪ್ರಕಾರ ನಾವು ಖರೀದಿಸಿದ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಹನುಮಂತಪ್ಪನ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ 1 ನೇ ಪ್ರತಿವಾದಿ ಹನುಮಂತಪ್ಪನವರ ಮನೆ , ದಕ್ಷಿಣಕ್ಕೆ ದೊಡ್ಡಹನುಮಪ್ಪನವರ ಮನೆ ಇದೆ.

ನಿಪಿ-1 ರಲ್ಲಿ ತೋರಿಸಿರುವ ವಿಸ್ತೀರ್ಣದ ಅಂಕಿಯನ್ನು 22 ಎಂದು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ನಾನು ಕಟ್ಟಿರುವ ಮನೆಯ ವಿಸ್ತೀರ್ಣದ ಉದ್ದಗಲವನ್ನು ಪರಿಶೀಲಿಸಿ ವರದಿಯನ್ನ ನೀಡಲು ನ್ಯಾಯಾಲಯದ ಕಮೀಷನರ್ ನ್ನು ನೇಮಕಮಾಡಲು ನನ್ನದೇನು ತಕರಾರು ಇರುವುದಿಲ್ಲ, ನಿವೇಶನವನ್ನು ಖರೀದಿಸಿದ ಒಂದು ವರ್ಷದೊಳಗೆ ನನ್ನ ತಂದೆಯವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಸದರಿ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು ನಿಪಿ-1 ರಲ್ಲಿ ತೋರಿಸಿದ ವಿಸ್ತೀರ್ಣದ ಸಂಪೂರ್ಣ ಅಳತೆಯಲ್ಲಿ ಸಂಪೂರ್ಣವಾಗಿ ಮನೆಯನ್ನು ಕಟ್ಟಿದ್ದು ಯಾವ ದಿಕ್ಕಿಗೂ ಜಾಗವನ್ನು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಾಗ ಬಿಟ್ಟಿರುವ ಕುರಿತು ಪಂಚಾಯತಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರಪಡಿಸಿರುವ

ನಿಪಿ-2 ರಿಂದ 8 ರವರೆಗಿನ ದಾಖಲೆಗಳಲ್ಲಿ ಮನೆ ಎಷ್ಟು ವಿಸ್ತೀರ್ಣದಲ್ಲಿದೆ. ಖಾಲಿ ಜಾಗ ಎಪಷ್ಟು ವಿಸ್ತೀರ್ಣದಲ್ಲಿದೆ ಎಂಬ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ.

ಈ ದಾವೆಯಲ್ಲಿ ಪ್ರತಿವಾದಿಗಳ ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಗಳ ಆಸ್ತಿಗಳ ವಿವರದ ಕುರಿತು ನನಗೆ ಗೊತ್ತಿಲ್ಲ. ಖಾನೆ ಸುಮಾರಿ ನಂ 149 ರಲ್ಲಿ ಅದರ ಅಳತೆ ಪೂರ್ವ-ಪಶ್ಚಿಮ 25ವರೆ ಅಡಿ ಉತ್ತರ-ದಕ್ಷಿಣ 27 ಅಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ನಾಗಪ್ಪನವರ ಆಸ್ತಿ , ಪಶ್ಚಿಮಕ್ಕೆ ಗ್ರಾಮ ಪಂಚಾಯತಿ ರಸ್ತೆ , ಉತ್ತರಕ್ಕೆ ಗ್ರಾಮ ಪಂಚಾಯತಿ ರಸ್ತೆ, ದಕ್ಷಿಣಕ್ಕೆ ನಮ್ಮ ಮನೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ಮನೆಯ ಮುಂದಿನ 3 ಅಡಿ ಜಾಗ ಬಿಟ್ಟು ಗ್ರಾಮ ಪಂಚಾಯತಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತಮ್ಮ ಆಸ್ತಿಯನ್ನ ನಾವು ಖರೀದಿಸುವ ಪೂರ್ವದಿಂದಲೂ ಸಹ ಅನುಭವದಲ್ಲಿದ್ದರು ಎಂದರೆ ಸರಿ. ಈ ದಾವೆಯ ದಾವಾಸ್ತಿಯ ಚೆಕ್ಕುಬಂದಿಯಲ್ಲಿ ಪ್ರತಿವಾದಿಗಳ ಆಸ್ತಿಯ ಇರುವ ಕುರಿತು ನಮೂದಿಸಿರುವುದಿಲ್ಲ. ಅದರಂತೆ ಪೂರ್ವಕ್ಕೆ ಉಪ್ಪಾರ ರಂಗಪ್ಪನ ಹಿತ್ತಲು ಎಂದರೆ ಸರಿ. ಸದರಿ ಆಸ್ತಿ ಪ್ರತಿವಾದಿಗೆ ಸೇರಿದ್ದು ಆಸ್ತಿ ಎಂದರೆ ಸರಿ. ನಮ್ಮ ಮನೆಯ ಪೂರ್ವ ದಿಕ್ಕಿನ ಗೋಡೆ ಮಣ್ಣಿನ ಗೋಡೆ ಎಂದರೆ ಸರಿ. ಅದರಲ್ಲಿಯಾವುದೇ ಕಿಟಕಿ ಬಾಗಿಲು ಇಲ್ಲ ಎಂದರೆ ಸರಿ. ಅದೇ ಪ್ರಕಾರ ನಮ್ಮ ಮನೆಯ ಉತ್ತರ ದಿಕ್ಕಿನ ಗೋಡೆಯಲ್ಲೂ ಸಹ ಯಾವುದೇ ಕಿಟಕಿ ಬಾಗಿಲು ಇಲ್ಲ ಎಂದರೆ ಸರಿ. ನಮ್ಮ ಮನೆಯ ಉತ್ತರ ದಿಕ್ಕಿನ ಗೋಡೆ ಪೂರ್ವ-ಪಶ್ಚಿಮವಾಗಿ ಒಟ್ಟು ಅಳತೆಯಲ್ಲಿ ಪೂರ್ತಿ ವಿಸ್ತೀರ್ಣಕ್ಕೆ ಮನೆ ಇದೆ ಎಂದರೆ ಸರಿ. ನಮ್ಮ ಮನೆಯ ಉತ್ತರ ದಿಕ್ಕ ಪ್ರತಿವಾದಿಯರ ತಳಪಾಯದ ನಡುವೆ ಇರುವ ಖಾಲಿ ಜಾಗಾದ ಕುರಿತು ಯಾವುದೇ ಅಳತೆ ಕಾರ್ಯವನ್ನು ಪಂಚಾಂತಿಯಿಂದ ಮಾಡಿಸಿಲ್ಲ ಅಥವಾ ನಾನು ಸಹ ಮಾಡಿಸಿರುವುದಿಲ್ಲ. ಪ್ರತಿವಾದಿಗಳು ತಳಪಾಯ ಹಾಕಿದ ನಂತರ ಕಟ್ಟಡ ಕಟ್ಟಲು ನಾವು ಬಿಡಲಿಲ್ಲ ಎಂದರೆ ಸರಿ. ಪ್ರತಿವಾದಿಗಳ ತಳಪಾಯದ ವಿಸ್ತೀರ್ಣವಾಗಲಿ ಅಥವಾ ತಳಪಾಯದಸುತ್ತಲೂ ಇರುವ ಖಾಲಿ ಜಾಗದ ವಿಸ್ತೀರ್ಣವಾಗಲಿ ನನಗೆ ಗೊತ್ತಿಲ್ಲ ಎಂದರೆ ಸರಿ. ಹಾಗಾಗಿ ಪ್ರತಿವಾದಿಗಳ ವಿರುದ್ದ ಗಲಾಟೆ ಮಾಡಿ ಮನೆ ಕಟ್ಟುವುದನ್ನು ನಿಲ್ಲಿಸಿ ಗಲಾಟೆ ಮಾಡಿ ಅವ ರವಿರುದ್ದ ಕ್ರಿವಿನಲ್ ಪ್ರಕರಣವನ್ನು ದಾಖಲಿಸಿದ್ದೆನೆ ಎಂದರೆ ಸಾಕ್ಷಿ 3ವರೆ ಅಡಿ ಜಾಗದ ಒತ್ತುವರಿ ಮಾಡಿದ್ದರಿಂದ ಪ್ರಕರಣದ ದಾಖಲಿಸಿದ್ದೆನೆ ಎಂದು ನುಡಿಯುತ್ತಾರೆ. ಸದರಿ ಒತ್ತುವರಿ ಕುರಿತು ಪಂಚಾಯತಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ನೀಡಿದ ನನ್ನ ಮನೆಯ ವಿಸ್ತೀರ್ಣದ ಕುರಿತು ನಮೂದಿಸಿಲ್ಲ. ನಾನು ದೌರ್ಜನ್ಯದಿಂದ ಪ್ರತಿವಾದಿಗಳು ಮನೆ ಕಟ್ಟುವುದನ್ನು ತಡೆದೆ ಎಂದರೆ ಸರಿ. ಪ್ರತಿವಾದಿಗಳ ತಳಪಾಯದಿಂದ ನಮ್ಮ ಮನೆಯ ಗೋಡೆಯ ನಡುವೆ ಇರುವ ಖಾಲಿ ಜಾಗದ ಅಳತೆ ನನಗೆ ಗೊತ್ತಿಲ್ಲ.

ನಾವು ಕೊಂಡಹ ಆಸ್ತಿಯಲ್ಲಿ  ಯಾವ ದಿಕ್ಕಿಗೂ ಜಾಗವನ್ನು ಬಿಟಿಟಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಮನೆಯ ಉತ್ತರ ದಿಕ್ಕಿನ ಭಾಗದಲ್ಲಿ 6 ಅಡಿ ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸಾಕ್ಷಿ 6 ಅಡಿ ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನಿರ್ಮಿಸಿರುವ ತಳಪಾಯ ನನ್ನ ಅಸ್ತಿಯಲ್ಲಿದೆ. ಪ್ರತಿವಾದಿಗಳ ತಳಪಾಯವು ನನ್ನ ಮನೆಯ ದಕ್ಷಿಣ ದಿಕ್ಕಿಗೆ ತಾಗಿದೆ. ತಳಪಾಯಕ್ಕೂ ಮತ್ತು ಗೋಡೆಗೂ ಹೊಂದಿಕೊಂಡಿಲ್ಲ ಎಂದರೆ ಸರಿ. ಹಾಗಾಗಿ ನನ್ನ ದಾವೆಯ ದಾವಾ ಪ್ರಾರ್ಥನೆಯಲ್ಲಿ ಕೇಳಿರುವ 3ನೇ ಪರಿಹಾರ ಸುಳ್ಳು ಎಂದರೆ ಸರಿಯಲ್ಲ. ದಾವಾ ಹೂಡುವ ಪೂರ್ವದಲ್ಲಿ ಪ್ರತಿವಾದಿಗಳು ತಳಪಾಯ ಹಾಕಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ದಾವೆ ಹೂಡುವ ಪೂರ್ವದಲ್ಲಿ  ಖಾಲಿ ಜಾಗ ಇತ್ತು ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದಲ್ಲಿ ತಳಪಾಯ ಇಲ್ಲ ಎಂದು ಹೇಳಿ ಬರೆಸಿರುತ್ತೇನೆ.  ಸದರಿ ತಳಪಾಯವನ್ನು ಪ್ರತಿವಾದಿಗಳು ಯಾವ ದಿನಾಂಕದಂದು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಈ ದಾವೆ ಹೂಡಿದ ನಂತರ ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಾನು ನನ್ನದಾವೆಯಲ್ಲಿ 3 ವರೆ ಅಡಿ ಖಾಲಿ ಜಾಗ ನನ್ನ ಮನೆಯ ಉತ್ತರ ದಿಕ್ಕಿಗೆ ಇದೆ ಎಂದು ಹೇಳಿ ಬರೆಸಿರುತ್ತೇನೆ. ನಮ್ಮ ಮನೆಯ ಸುತ್ತಾ ಜಾಗವಿಲ್ಲದ ಕಾರಣ ಕಾಂಪೌಂಡ್ ನ್ನು ನಿರ್ಮಾಣ ಮಾಡಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ಸಹ ನಾನು ನನ್ನ ವಾದಪತ್ರದಲ್ಲಿ ನಮೂದಿಸಿದ್ದೇನೆ. ಪ್ರತಿವಾದಿಗಳು ಅಸಹಾಯಕರಾದ ಕಾರಣ ನಾನು ಊರಿನಲ್ಲಿ ಬಲಾಢ್ಯನಾಗಿರುವುದರಿಂದ ಪ್ರತಿವಾದಿಗಳಿಗೆ ಅವರ ಜಾಗದಲ್ಲಿ ಮನೆ ನಿರ್ಮಾಣ ಮಾಡಲು ಬಿಟ್ಟಿಲ್ಲ ಎಂದರೆ ಸಾಕ್ಷಿ 3 ವರೆ ಅಡಿ ಒತ್ತುವರಿ ಮಾಡಿದ್ದರಿಂದ ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ಮನೆ ಕಟ್ಟುವ ಸಾಮಗ್ರಿಗಳ ಬೆಲೆ 2017 ರಲ್ಲಿದ್ದಕ್ಕಿಂತ ಪ್ರಸ್ತುತ 10 ಪಟ್ಟು ಹೆಚ್ಚಾಗಿದೆ ಎಂದರೆ ಸರಿ.ಹಾಗಾಗಿ ನಾನು ಪ್ರತಿವಾದಿಗಳಿಗೆ ತಂಟೆ ತಕರಾರು ತೆಗೆದು ಅವರಿಗೆ ಸುಮಾರು 5 ಲಕ್ಷ ರೂ ಲುಕ್ಸಾನು ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ದಾವ ಪತ್ರದಲ್ಲಿರುವ ಕಚ್ಚಾ ನಕಾಶೆಯನ್ನು ನಾನು ಹೇಳಿದಂತೆ ನಮ್ಮ ವಕೀಲರು ತಯಾರಿಸಿರುತ್ತಾರೆ, ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಕಚ್ಚಾ ನಕಾಶೆಯ ವಿಸ್ತೀರ್ಣ ಚೆಕ್ಕು ಬಂದಿಯನ್ನು ಹೇಳುವಂತೆ ಕೇಳಲಾಗಿ ಸಾಕ್ಷಿ ಕಚ್ಚಾ ನಕಾಶೆ ಇಂಗ್ಲೀಷನಲ್ಲಿ ಬರೆದಿದ್ದು ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯತ್ತಾರೆ. ಸದರಿ ಚಕ್ಕುಬಂದಿ ಇಂಗ್ಲೀಷ್ನಲ್ಲಿ ಇರುವ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಚ್ಚಾ ನಕಾಶೆಯಲ್ಲಿನ ಚೆಕ್ಕುಬಂದಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಸದರಿ ಚೆಕ್ಕುಬಂದಿಯನ್ನು ಹೇಳದೆ ಇರುವುದರಿಂದ ಸದರಿ ಕಚ್ಚಾ ನಕಾಶೆಯಲ್ಲಿ 4 ದಿಕ್ಕಿಗೂ ಚೆಕ್ಕುಬಂದಿಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ನಾನು ಹೇಳಿದಂತೆ ನಮ್ಮ ವಕೀಲರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಚ್ಚಾ ನಕಾಶೆಯಲ್ಲಿ ದಿಕ್ಕುಗಳನ್ನು ಕೂಡ

ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಚ್ಚಾನಕಾಶೆಯಲ್ಲಿ ಚೆಕ್ಕುಬಂದಿಯನ್ನು ಕನ್ನಡದಲ್ಲಾಗಲಿ ಅಥವಾ ಇಂಗ್ಲೀಷ್ ನಲ್ಲಾಗಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರಿದಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.